# ಕರ್ನಾಟಕ ಕೋಮು ಸೌಹಾರ್ದ ವೇದಿಕೆ,

**ಸೌಹಾರ್ದ ಬಂಧುಗಳಲ್ಲೊಂದು ಕಾರ್ಯದರ್ಶಿ ಮಂಡಳಿಯ ಕಳಕಳಿಯ ಮನವಿ**

ನಮ್ಮ ವೇದಿಕೆಯು 2002 ರಿಂದಲೂ ಧೀಮಂತವಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಒಂದು ಫಲಪ್ರದವಾದ ಚಳವಳಿಯನ್ನು ಕಟ್ಟಿ, ಬೀದಿ ಹಾಗೂ ಬೌದ್ಧಿಕ ಹೋರಾಟಗಳನ್ನು ನಡೆಸುತ್ತಿರುವುದು ತಮಗೆಲ್ಲಾ ತಿಳಿದೇ ಇದೆ. 14 ವರ್ಷಗಳ ಈ ಹೋರಾಟವನ್ನು ನಾವು ನಿಮ್ಮೆದೆಗಳಲ್ಲಿಯೂ–ನಮ್ಮೂರುಗಳ ಸಾರ್ವಜನಿಕ ಬೀದಿಗಳಲ್ಲಿಯೂ, ನೆಲೆಗೊಳಿಸಿಕೊಂಡು, ನಡೆಸಿಕೊಂಡು ಬರುತ್ತಿದ್ದೇವೆ. ನಮ್ಮ ಪ್ರತಿ ಕಾರ್ಯಕ್ರಮಕ್ಕೂ ನಾವು ತಗಲುವ ವೆಚ್ಚವನ್ನು ಲೆಕ್ಕ ಹಾಕಿ, ಅಷ್ಟನ್ನು ಮಾತ್ರ ಸಂಗ್ರಹಿಸಿ, ಕಾರ್ಯಕ್ರಮದ ನಂತರ ಪ್ರತಿ ರೂಪಾಯಿಯ ಲೆಕ್ಕವನ್ನು ನಮ್ಮ ಜೊತೆ ಹೆಗಲುಗೊಟ್ಟ ಸಂಗಾತಿಗಳ ಗಮನಕ್ಕೆ ನೀಡುವ ವಾಡಿಕೆ ಮಾಡಿಕೊಂಡಿದ್ದೇವೆ. ಇದೀಗ ನಮ್ಮ ಪ್ರತಿರೋಧವು ಮತ್ತೊಂದು ಹಂತಕ್ಕೆ ಜಿಗಿಯಬೇಕಾಗಿದೆ. ಕೋಮುವಾದಿ ಮತ್ತು ಫ್ಯಾಸೀವಾದಿ ಶಕ್ತಿಗಳಿಗೆ ಸಮರ್ಪಕ ಪ್ರತಿರೋಧದ ಮಾರ್ಗಗಳನ್ನು ರೂಪಿಸಿಕೊಳ್ಳಬೇಕಿದೆ. ಹಲವು ಹಂತದ, ಹಲವು ಆಯಾಮಗಳ ಬಹುಮುಖಿ ಚಟುವಟಿಕೆಯನ್ನು ನಡೆಸಲು ಬೆಂಗಳೂರಿನಲ್ಲಿ ಒಂದು ಕೇಂದ್ರ ಕಛೇರಿಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ಈ 14 ವರ್ಷಗಳ ಬೀದಿ ಹೋರಾಟ, ಸಮಾವೇಶಗಳು, ವಿಚಾರ ಸಂಕಿರಣಗಳು, ಪುಸ್ತಕಗಳು, ಸತ್ಯಶೋಧನೆಗಳು, ಜಾಥಾಗಳಿಗೆ ಲಕ್ಷಾಂತರ ರೂಗಳನ್ನು ಕಷ್ಟಪಟ್ಟು ದುಡಿದ ಜನಸಾಮಾನ್ಯರು, ಸಂಬಳ ತೆಗೆದುಕೊಳ್ಳುವ ವಿವಿಧ ಉದ್ಯೋಗಸ್ಥರು ಮತ್ತು ಜ್ಯಾತ್ಯತೀತ ವ್ಯಕ್ತಿಗಳು ನೀಡಿ ಮುನ್ನಡೆಸಿದ್ದೀರಿ. ವೇದಿಕೆ ಈಗ ಮತ್ತೊಂದು ವಿನಯಪೂರ್ವಕವಾದ ಮನವಿಯೊಂದನ್ನು ಹೊತ್ತು ನಿಮ್ಮತ್ತ ಬರುತ್ತಿದೆ. ನಮ್ಮ ಕೇಂದ್ರ ಕಛೇರಿಯು ಜನಪರ ಚಳವಳಿಯ ಕಾರ್ಯಕರ್ತರಿಗೆ, ಸಂಘಟನೆಗಳಿಗೆ ಸೌಹಾರ್ದ ಕೇಂದ್ರವಾಗಬೇಕೆಂಬ ಮಹದಾಶೆಯನ್ನು ಹೊಂದಿದೆ. ಈ ಕೇಂದ್ರ ಕಛೇರಿಯನ್ನು ಲೀಸ್ ಆಗಿ ತೆಗೆದುಕೊಳ್ಳಲು ಸುಮಾರು 25 ಲಕ್ಷ ರೂಗಳಷ್ಟು ಅಗತ್ಯ ಬೀಳಬಹುದೆಂದು ಅಂದಾಜಿಸಿದ್ದೇವೆ. ಹೋರಾಟದ ಬಂಧುಗಳು/ಸಂಘಟನೆಗಳು ನಿಮ್ಮ ಮಿತಿಗಳ ಅನುಕೂಲದಲ್ಲಿ ಉದಾರವಾಗಿ ಧನ ಸಹಾಯ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

ವೇದಿಕೆಯ ಬ್ಯಾಂಕ್ ಖಾತೆಯ ವಿವರ :

Karnataka Komu Souharda Vedike,
A/c Number : 32716795270
IFSC : sbin0004928
State Bank of India, Lalbhag branch,
Mangalore,

ಇಂತಿ,

ಕೆ. ಫಣಿರಾಜ್,
ಖಜಾಂಚಿಗಳು,
9448983294

ಸಲಹಾ ಸಮಿತಿ ಪರವಾಗಿ
ಎ.ಕೆ.ಸುಬ್ಬಯ್ಯ, ಗೌರಿ ಲಂಕೇಶ್, ಎಂ.ಎಸ್.ಇಕ್ಬಾಲ್,
ಯು.ಎಚ್.ಉಮರ್, ಸೆಬಾಸ್ಟಿಯನ್ ದೇವರಾಜ್, ರಾಮದಾಸ್ ರಾವ್,

ಕಾರ್ಯದರ್ಶಿ ಮಂಡಳಿ ಪರವಾಗಿ
ಸುರೇಶ್ ಭಟ್ ಬಾಕ್ರಬೈಲ್.

<u>A Fervent Appeal to Our Karnataka Komu Souhardu (KKSV) Community</u>

You are all aware of how our Vedike since 2002 has built a powerful movement against communal forces in Karnataka, and waged unceasing struggles on the street and the intellectual level. This struggle is rooted in your hearts as well as in the public spaces of our towns. While organizing every programme, we made it a practice to collect only the minimum funds required to meet the estimated expenditure, and on completion of the programme, we have placed before you detailed accounts of every rupee spent.

Now, in our continuing war against communal forces, we need to make a leap to yet another level. It is time to launch a wide-ranging and prolonged struggle on many fronts and in several stages, working out many new strategies. To strengthen this initiative, we have decided to establish a central office in Bangalore. Through the years, hard-working people, salaried professionals, and secular activists have supported the movement by contributing several lakhs of rupees towards organizing street processions, conventions, seminars, book releases, fact-finding investigations, and jathas.

Now we are approaching you with another humble appeal: We aspire to make this office of KKSV a nodal centre that brings together under one roof various people's activists and people's movements. According to our estimate, a sum of Rs 25 lakh is needed in order to lease office space for the centre. We appeal to you, activists and organizations engaged in our common struggle for communal harmony, to make generous contributions within your means for this cause.

Bank Account details of our Vedike :

Karnataka Komu Souharda Vedike,
A/c Number : 32716795270
IFSC : sbin0004928
State Bank of India, Lalbhag branch,
Mangalore,

Regards,

K. Phaniraj
Treasurer
9448983294

ಸಲಹಾ ಸಮಿತಿ ಪರವಾಗಿ

A.K.Subbaiah, Gouri Lankesh, M.S.Iqbal,
U.H.Umar, Sebastian Devaraj, Ramadas Rao,

ಕಾರ್ಯದರ್ಶಿ ಮಂಡಳಿ ಪರವಾಗಿ

Suresh Bhat Bakrabail,